ಅಧ್ಯಕ್ಷರು : ಆಯಿತು, ಮುಂದೆ ಹೋಗೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಮಧ್ಯೆ ಪ್ರವೇಶ ಮಾಡುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಹಿರಿಯ ಸಚಿವರಾದ ಸಿದ್ದರಾಮಯ್ಯನವರು ಇದ್ದಾರೆ, ಯಾವುದೇ ಪ್ರಶ್ನೆಗಳು ಬಂದರೆ ಹಿಂದಿನ ದಿವಸ ಆ ಮಂತ್ರಿಗಳು ಆ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಬ್ರೀಫ್ ಮಾಡಿ ನಂತರ ಅವರಿಗೆ ಸಮಾಧಾನವಾದ ಮೇಲೆ ಇಲ್ಲಿಗೆ ಬಂದು ಉತ್ತರವನ್ನು ಕೊಡುತ್ತಾರೆ. ಸರಿಯಿಲ್ಲದಿದ್ದರೆ ಅವರೇ ಬಂದು ವಿತ್‌ಡ್ರಾ ಮಾಡಿಕೊಳ್ಳುತ್ತಾರೆ. ಈ ರೀತಿ ಅನೇಕಭಾರಿ ಘಟನೆಗಳು ನಡೆದಿವೆ. ಒಂದು ಸಾರಿ ಕೊಟ್ಟಂಥ ಉತ್ತರವನ್ನು ಪರಿಶೀಲನೆ ಮಾಡಿ ಇದು ಸರಿಯೋ ಅಲ್ಲವೋ ಎಂದು ಮಂತ್ರಿಗಳು ತಿಳಿದುಕೊಳ್ಳದೇ ಇಲ್ಲಿಗೆ ಬಂದು ಅಥವಾ ಅಧಿಕಾರಿಗಳು ಏನೋ ಕೊಟ್ಟರೆ ತಪ್ಪು ಮಾಹಿತಿ ಇದ್ದರೆ ಅದನ್ನು ಸರಿಪಡಿಸಿಕೊಂಡು ಇಲ್ಲಿ ಬರದಿದ್ದರೆ ಈ ಪ್ರಶ್ನೋತ್ತರದ ಮಹತ್ವವೇನಾಗುತ್ತದೆ ಸಾರ್. ನೀವು ವಾರ್ನ್ ಮಾಡಿದ್ದು ಸರಿ, ನೀವು ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದು ಸರಿ, ಆದರೆ ಮಂತ್ರಿಗಳ ಜವಾಬ್ದಾರಿಯಿಂದ ಅಧಿಕಾರಿಗಳ ಜೊತೆ ಸಮಾಲೋಚನೆಯನ್ನು ಮಾಡಿ ಸ್ಪಷ್ಟವಾದ ಉತ್ತರವನ್ನು ತೆಗೆದುಕೊಂಡು ಅವರಿಗೆ ಮನಸ್ಸಿಗೆ ಸಮಾಧಾನವಾದ ಮೇಲೆ ಇಲ್ಲಿಗೆ ಬಂದು ಉತ್ತರವನ್ನು ಕೊಡಬೇಕಾಗುತ್ತದೆ. ಅದನ್ನು ದಯಮಾಡಿ ಹೇಳಿ.

ಅಧ್ಯಕ್ಷರು: ಆಯಿತು. ಮುಂದಕ್ಕೆ ಹೋಗೋಣ. ಇದನ್ನು ಗಂಭೀರವಾಗಿ ದಯಮಾಡಿ ಎಲ್ಲಾ ಮಂತ್ರಿಗಳು ತೆಗೆದುಕೊಳ್ಳಬೇಕು.

(1821) **ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ (ಮುಧೋಳ)** (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಮೂರು ವರ್ಷ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿದವರ ಸಂಖ್ಯೆ ಎಷ್ಟು?

ಇ) ಮೂರು ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಈ) ಹಾಗಿದ್ದರೆ, ಅವರಿಗೆ ಎಷ್ಟು ದಿನಗಳಲ್ಲಿ ಖಾಯಂ ಆದೇಶ ನೀಡಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ

ಸಂಖ್ಯೆ 667

ಆ) ಮೂರು ವರ್ಷ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿದವರ ಸಂಖ್ಯೆ 737

ಇ) ಮೂರು ವರ್ಷ ಸೇವೆ ಪೂರೈಸಿದ 647 ಗುತ್ತಿಗೆ ವೈದ್ಯರನ್ನು ಸರ್ಕಾರಿ ಸೇವೆಯಲ್ಲಿ ಈಗಾಗಲೇ ಖಾಯಂಗೊಳಿಸಲಾಗಿದೆ. 396 ಗುತ್ತಿಗೆ ವೈದ್ಯರನ್ನು ಖಾಯಂಗೊಳಿಸಲು ಸರ್ಕಾರದ ಪರಿಶೀಲನೆಯಲ್ಲಿದೆ. ಮೂರು ವರ್ಷ ಪೂರೈಸಿದ ಗುತ್ತಿಗೆ ವೈದ್ಯರನ್ನು ಹಂತ ಹಂತವಾಗಿ ಖಾಯಂಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಅವಧಿ ನಿಗಧಿಪಡಿಸುವುದಿಲ್ಲ.

ಶ್ರೀ ಕಾರ್‌ಜೋಳ್ ಗೋವಿಂದ ಮಕಟಪ್ಪ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಉತ್ತರ ಸಮರ್ಪಕವಾಗಿಲ್ಲ. ಬಹುಶಃ ಮತ್ತೆ ಅದೇ ಪ್ರಶ್ನೆ ಈಗ ಬರುತ್ತದೆ. ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ಸಚಿವರು ಹೇಳಿದ್ದಾರೆ. ಮೂರು ವರ್ಷ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿದವರ ಸಂಖ್ಯೆ 737 ಎಂದು. ಮತ್ತೆ ಇ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ. ಮೂರು ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಯೇನು ಎಂದು ಕೇಳಿದ್ದೇವೆ. ಅಲ್ಲೇನು ಹೇಳಿದ್ದಾರೆಂದರೆ ಈಗಾಗಲೇ ಮೂರು ವರ್ಷ ಖಾಯಂ ಆಗಿ ಕೆಲಸ ಮಾಡಿದವರನ್ನು 647 ಮಂದಿಯನ್ನು ನಾವು ರೆಗ್ಯುಲರೈಜ್ ಮಾಡಿದ್ದೇವೆ, ಇನ್ನು ಬಾಕಿ ಉಳಿದ 396 ಮಂದಿಯನ್ನು ಖಾಯಂಗೊಳಿಸಲಿಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಎರಡನ್ನೂ ಒಟ್ಟಿಗೆ ಮಾಡಿದರೆ 1043 ವೈದ್ಯರ ಸಂಖ್ಯೆಯಾಗುತ್ತದೆ. ಇಲ್ಲಿ ಹೇಳಿದ್ದಾರೆ, 737 ಎಂದು ಅದಕ್ಕೆ ದಯಮಾಡಿ ಮಾನ್ಯ ಸಚಿವರು ಇನ್ನೊಂದು ಸಾರಿ ವೆರಿಫೈ ಮಾಡಿಕೊಳ್ಳಬೇಕು. ಮತ್ತೆ ತಾವೇನು ಅಂಕಿಯನ್ನು ಕೊಟ್ಟಿದ್ದೀರಿ, 727 ಎಂದು ಹೇಳಿ, ಅದರಲ್ಲಿ ಟಿಬಿ ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಟಿಬಿ ಸೊಸೈಟಿ ಎಂದರೆ ರಾಷ್ಟ್ರೀಯ

ಕ್ಷಯರೋಗ ನಿವಾರಣ ಸಂಸ್ಥೆ, ಭಾರತ ಸರ್ಕಾರದ ಒಂದು ಯೋಜನೆ ಅದು. ಅದರಲ್ಲಿ ಕೆಲಸ ಮಾಡತಕ್ಕಂಥವರಿಗೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ. ಟಿಬಿ ಸೊಸೈಟಿಯಲ್ಲಿ ಅಪಾಯಿಂಟ್ ಮಾಡಿಕೊಂಡು ಅಲ್ಲೇ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬಹುದು, ಅವರನ್ನೂ ಸೇರಿಸಿ ಕೊಟ್ಟಿದ್ದೀರಾ? ಅಥವಾ ಅವರನ್ನು ಬಿಟ್ಟು ಕೊಟ್ಟಿದ್ದೀರಾ ಒಂದು. ಆಮೇಲೆ ಇನ್ನೊಂದು ತಮಗೆ ಗೊತ್ತಿರುವ ಹಾಗೆ ಏಡ್ಸ್ ಪ್ರಿವೆನ್ಷನ್ ಸೊಸೈಟಿಯಲ್ಲಿ ಕೂಡ ಅದೊಂದು ಯೋಜನೆ. ಅದಕ್ಕೂ ಕೂಡ ಸೆಪರೇಟಾದ ಸೊಸೈಟಿ ಇದೆ. ಅದನ್ನೂ ಇದರಲ್ಲಿ ಸೇರಿಸಿದ್ದೀರಾ? ಇಲ್ಲವಾ? ಆಮೇಲೆ ಇನ್ನೊಂದು ತಾಯಿ ಮತ್ತು ಮಕ್ಕಳ ಆರೋಗ್ಯ ನೋಡತಕ್ಕದ್ದು ಅದು ಒಂದು ಸ್ಕೀಮ್ ಇತ್ತು. ಅದನ್ನೂ ಇದರಲ್ಲಿ ಸೇರಿಸಿದ್ದೀರಾ ಅಥವಾ ಇಲ್ಲವೇ? ಒಂದು ವೇಳೆ ಸೇರಿಸದೇ ಇದ್ದರೆ ಅವರನ್ನೂ ಸೇರಿಸಿ ತಾವು ರೆಗ್ಯುಲರೈಜ್ ಮಾಡಬೇಕಾಗುತ್ತದೆ. ಏಕೆಂದರೆ ಅವರು ಕೂಡ ಮೂರು ವರ್ಷ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಭಾರತ ಸರ್ಕಾರದಿಂದ ಅನುದಾನ ಬರುವುದರಲ್ಲಿ ಸ್ಯಾಲರಿಯನ್ನು ತೆಗೆದುಕೊಳ್ಳುತ್ತಿರಬಹುದು. ಆದರೆ ಅವರು ನಮ್ಮ ಎಂಪ್ಲಾಯೀಸ್. ರಾಜ್ಯಸರ್ಕಾರದ ಎಂಪ್ಲಾಯೀಸ್. ಅವರನ್ನು ತಾವು ಮಾಡಬೇಕಾಗುತ್ತದೆ. ನಮಗೆ ತಿಳಿದಂತೆ ಈಗಾಗಲೇ ಆರ್‌ಎನ್‌ಟಿಪಿಸಿ ಸ್ಕೀಮ್‌ನಲ್ಲಿ ರಾಷ್ಟ್ರೀಯ ಕ್ಷಯರೋಗ ನಿವಾರಣ ಸಂಸ್ಥೆಯಲ್ಲಿ ಐದು ಜನರು ಕೆಲಸವನ್ನು ಮಾಡುತ್ತಿದ್ದಾರೆ. ಐದು ಜನ ಅವರು ಈಗಾಗಲೇ ಮೂರು ವರ್ಷ ಕಂಪ್ಲೀಟ್ ಮಾಡಿದವರು ಇದ್ದಾರೆ. ಅವರನ್ನು ತಾವು ನೇಮಕ ಮಾಡಿಕೊಳ್ಳಬೇಕಾಗುತ್ತದೆ ಆದೇಶದೊಳಗೆ. ಇಲ್ಲವೆಂದರೆ ದುರ್ದೈವದ ಸಂಗತಿ ಎಂದರೆ ನಮ್ಮ ಸರ್ಕಾರಿ ಆದೇಶಗಳು ಹೊರಡಿಸುವಾಗ ಲೋಕಲ್ ಬಾಡೀಸ್‌ನಲ್ಲಿ ಕೆಲಸ ಮಾಡತಕ್ಕವರು ಸೊಸೈಟಿಯಲ್ಲಿ ಕೆಲಸ ಮಾಡತಕ್ಕವರು ಎಲ್ಲರನ್ನೂ ಸೇರಿಸಿ ಎಂದು ಹೇಳಿ ಒಂದು ಆದೇಶ ಇಸ್ಯೂ ಆದರೆ ಈ ಸಮಸ್ಯೆ ಬರುವುದಿಲ್ಲ. ತಮ್ಮ ಆದೇಶಗಳನ್ನು ಮಾಡುವುದರಿಂದ ಇವರೆಲ್ಲಾ ಬಿಟ್ಟು ಹೋಗುತ್ತಾರೆ. ಈಗಾಗಲೇ ತಾವು 647 ಮಂದಿಯನ್ನು ಖಾಯಂ ಮಾಡಿದ್ದೇವೆಂದು ಹೇಳಿದ್ದೀರಿ.

ಅಧ್ಯಕ್ಷರು – ಮಾನ್ಯ ಕಾರಜೋಳರವರೇ, ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಗೋವಿಂದ ಕಾರಜೋಳ ಮಕಟಪ್ಪ : ಮಾನ್ಯ ಅಧ್ಯಕ್ಷರೇ, ಅದರಲ್ಲಿ ಅವರನ್ನು ಸೇರಿಸಬೇಕಾಗುತ್ತದೆ. ಸರ್ಕಾರ ಇನ್ನೊಂದು ಏನು ಹೇಳಿದ್ದಾರೆ ಅಂದರೆ 667 ವೈದ್ಯರ ಹುದ್ದೆಗಳು ರಾಜ್ಯದಲ್ಲಿ ಖಾಲಿ ಇದೆಯೆಂದು ಹೇಳಿದ್ದಾರೆ, 667 ಹುದ್ದೆಗಳು ಖಾಲಿ ಇದ್ದರೆ 396 ಮಂದಿಯನ್ನು ರೆಗ್ಯುಲರೈಜ್ ಮಾಡಲಿಕ್ಕೆ ಏನು ತೊಂದರೆ ಇದೆ? ಇದಕ್ಕೇನು

ಬಜೆಟ್ ಪ್ರಶ್ನೆ ಬರುವುದಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ, ಅವರೆಲ್ಲರನ್ನೂ ಇಮ್ಮಿಡಿಯೇಟ್ ಏಕೆಂದರೆ ಹಿಂದಿನ ಸರ್ಕಾರ ಕಾಗೋಡು ತಿಮ್ಮಪ್ಪನವರು ಆರೋಗ್ಯ ಸಚಿವರಾಗಿದ್ದ ಸಂದರ್ಭದಲ್ಲಿ ಒಂದು ಆದೇಶವನ್ನು ಮಾಡಿದ್ದಾರೆ, ಯಾರು ಮೂರು ವರ್ಷ ಸೇವೆಯನ್ನು ಮುಗಿಸುತ್ತಾರೆ, ಮರುದಿವಸ ಅವರನ್ನು ತಕ್ಷಣ ಖಾಯಂ ಮಾಡುತ್ತೇವೆಂದು ಹೇಳಿ, ಇದನ್ನು ರೆಗ್ಯುಲರೈಜ್ ಮಾಡಿಕೊಂಡು ಹೋಗಲಿಕ್ಕೆ ಏನು ತೊಂದರೆ ಇದೆ? ಅದಕ್ಕೆ ಪ್ರತ್ಯೇಕ ಆರ್ಡರ್ಸ್ ಬೇಕಾಗಿಲ್ಲ, ನಾವು ನಮ್ಮ ಸರ್ಕಾರದಲ್ಲಿ ಅವರಿಗೆ 7400 ರೂ.ಗಳನ್ನು ಕೊಡುತ್ತೇವೆ ಗುತ್ತಿಗೆ ವೈದ್ಯರಿಗೆ ಈಗ ಮೊನ್ನೆ ಹಿಂದಿನ ಅಧಿವೇಶನದಲ್ಲಿ ಹತ್ತು ಸಾವಿರ ರೂ. ಮಾಡಿದ್ದಾರೆ, ಆದರೆ ಇದೇ ನಮ್ಮ ನೆರೆ ರಾಜ್ಯ ಮಹಾರಾಷ್ಟ್ರದಲ್ಲಿ 17 ಸಾವಿರ ರೂ.ಗಳನ್ನು ಗುತ್ತಿಗೆ ಆಧಾರದವರಿಗೆ ಕೊಡುತ್ತಾರೆ. ಆಂಧ್ರದಲ್ಲಿ 22 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ, ಏಕೆ ಹೆಚ್ಚಿಗೆ ಕೊಡುತ್ತಾರೆಂದರೆ ಅವರಿಗೆ ಪೆನ್ಸ್‌ನ್ ಬೆನಿಫಿಟ್ಸ್ ಯಾವುದೂ ಇಲ್ಲ. ಯಾವುದೇ ಸೌಲಭ್ಯಗಳು ಇಲ್ಲ. ಆ ಕಾರಣಕ್ಕಾಗಿ ಅವರಿಗೆ ಜಾಸ್ತಿ ಕೊಡುತ್ತಿದ್ದಾರೆ.

ಅಧ್ಯಕ್ಷರು: ತಾವು ಪ್ರಶ್ನೆಗಳನ್ನು ಕೇಳಿ, ಏಕೆಂದರೆ ಒಂದೊಂದೇ ಪ್ರಶ್ನೆಗೆ ಅವರು ಉತ್ತರ ಹೇಳಲಿ.

ಶ್ರೀ ಕಾರಜೋಳ ಗೋವಿಂದ ಮಕಟಪ್ಪ: ಎಲ್ಲವನ್ನೂ ಸೇರಿಸಿ ಉತ್ತರ ಹೇಳಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು: ಆಮೇಲೆ ನೀವು ಉಪ ಪ್ರಶ್ನೆಗಳನ್ನು ಕೇಳಬಹುದು.

ಶ್ರೀ ಎನ್.ಚೆಲುವರಾಯಸ್ವಾಮಿ (ಮಾನ್ಯ ಆರೋಗ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದರೂ ಸಹ ಸೂಕ್ತವಾದ ಉತ್ತರ ಇಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಸೆಂಟ್ರಲ್ ಗವರ್ನಮೆಂಟ್ ಸಹಾಯಧನದಿಂದ ಪಡೆಯುತ್ತಿರತಕ್ಕಂಥ ಸಂಸ್ಥೆಯಲ್ಲಿ ನಾವೇನು ಕಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರ್ಸ್‌ನ್ನು ತೆಗೆದುಕೊಂಡಿದ್ದೇವೆ, ಇದರಲ್ಲಿ ಇನ್‌ಕ್ಲೂಡ್ ಆಗಿಲ್ಲ. ಪ್ರತ್ಯೇಕವಾಗಿ ಅದನ್ನು ನಾವು ಪರಿಗಣಿಸುತ್ತೇವೆ. ಯಾವ ಸಂಸ್ಥೆಯಲ್ಲಿ ತೆಗೆದುಕೊಂಡಿದ್ದೇವೆ, ನಾವು ಪ್ರಸ್ತಾವನೆಯನ್ನು ತರಿಸಿ ಮುಂದಿನ ಕ್ರಮಕ್ಕೆ ಗಮನ ಹರಿಸುತ್ತೇವೆ. ಈಗ ನಮ್ಮ ಆರೋಗ್ಯ ಇಲಾಖೆಯಲ್ಲಿ ರಾಜ್ಯ ಸರ್ಕಾರದಿಂದ ನಾವು ನಡೆಸುತ್ತಿರತಕ್ಕದ್ದರಲ್ಲಿ 667 ಖಾಲಿ ಹುದ್ದೆಗಳು ಇವೆ ಎಂದು

ಹೇಳಿದ್ದೇನೆ. ಜೊತೆಗೆ 737 ಎಂದು ಹೇಳಿರತಕ್ಕದ್ದು ಈಗಾಗಲೇ ಮೂರು ವರ್ಷ ಕಂಪ್ಲೀಟ್ ಆಗಿರತಕ್ಕದ್ದು. ಆಸ್ ಆನ್ ಟುಡೇ ಕಂಪ್ಲೀಟ್ ಆಗಿರತಕ್ಕದ್ದನ್ನು ನಾವು ಹೇಳಿದ್ದೇವೆ. ಅದರಲ್ಲಿ 396 ಹುದ್ದೆ ಬಗ್ಗೆ ಈಗಾಗಲೇ ಆರ್ಥಿಕ ಇಲಾಖೆಗೆ ಹೋಗಿ, ಕ್ಯಾಬಿನೆಟ್‌ಗೆ ಹೋಗಿ ಇನ್ನೇನು ನಾವು ಅವರಿಗೆ ಅಪಾಯಿಂಟ್‌ಮೆಂಟ್ ಕೊಡತಕ್ಕ ಹಂತದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಸರ್ಕಾರ ತುರ್ತು ಕ್ರಮ ತೆಗೆದುಕೊಳ್ಳತಕ್ಕ ಸ್ಥಿತಿಯಲ್ಲಿ 396 ಹುದ್ದೆಗಳ ಬಗ್ಗೆ ಇದೆ. ಇನ್ನು ಉಳಿದಂತಹ 341 ಹುದ್ದೆ ಬಗ್ಗೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಿಕ್ಕೆ ಸಹ ನಾವು ಇಲಾಖೆಗೆ ಸೂಚನೆ ಮಾಡಿದ್ದೇವೆ. ಎಲ್ಲಾ ಜಿಲ್ಲೆಯ, ತಾಲ್ಲೂಕಿನ, ಸಂಪೂರ್ಣ ಮಾಹಿತಿಯೊಂದಿಗೆ ಅವರು ಪ್ರಸ್ತಾವನೆಯನ್ನು ಸಲ್ಲಿಸಲಿಕ್ಕೆ ಡೈರೆಕ್ಷನ್ ಅನ್ನು ನಾವು ಕೊಟ್ಟಿದ್ದೇವೆ. ಉಳಿದಂತಹದು ಕಂಟ್ರಾಕ್ಟ್ ಬೇಸಿಸ್ ವಿಚಾರದಲ್ಲಿ ಹೊರ ರಾಜ್ಯದಲ್ಲಿ ಸ್ಯಾಲರಿ ಜಾಸ್ತಿ ಇದೆ ಎಂದು ಹೇಳುತ್ತಿದ್ದಾರೆ. ನಮ್ಮಲ್ಲಿ ಕಂಟ್ರಾಕ್ಟ್ ಬೇಸಿಸ್‌ನವರಿಗೆ ಸ್ಯಾಲರಿಯನ್ನು ಈಗ ಏಕ್‌ದಂ 7400 ರೂಪಾಯಿಯಿಂದ 11 ಸಾವಿರ ಕೊಟ್ಟಿದ್ದೇವೆ. ಹತ್ತು ಸಾವಿರ ಎಂದು ಹೇಳಿದೆ. 11 ಸಾವಿರ ಅಪ್ರೂವ್ ಆಗಿರುವುದು. ನಮ್ಮ ಮಾನ್ಯ ಉಪಮುಖ್ಯಮಂತ್ರಿಗಳು ಬಹಳ ಉದಾತ್ತತೆಯಿಂದ ಆರೋಗ್ಯ ಇಲಾಖೆಯಲ್ಲಿ ಇವತ್ತು ಪ್ರತಿ ವರ್ಷಕ್ಕಿಂತ ಹೆಚ್ಚು ಅನುದಾನವನ್ನು ಕೊಡುವುದರ ಜೊತೆಗೆ ಎಲ್ಲಾ ಸಮಸ್ಯೆಯನ್ನು ನಿವಾರಣೆ ಮಾಡಲಿಕ್ಕೆ ಒತ್ತು ಕೊಟ್ಟಿದ್ದಾರೆ. 7400 ರಿಂದ 11 ಸಾವಿರಕ್ಕೆ ಜಾಸ್ತಿ ಮಾಡಿದ್ದೇವೆ. ಹತ್ತು ಸಾವಿರದಿಂದ 13 ಸಾವಿರ ರೂಪಾಯಿ ಮಾಡಿದ್ದೇವೆ. ಅವರನ್ನು ಶಾಶ್ವತವಾಗಿ ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಇಡುವುದಾದರೆ ನೀವು ಹೇಳಿದ ಹಾಗೆ ಮಾಡಬಹುದು. ಅವರಿಗೆ ಪೆನ್‌ಷನ್ ಬರುವುದಿಲ್ಲ, ಅಥವಾ ರಿಟೈರ್‌ಮೆಂಟ್ ಬೆನಿಫಿಟ್ ಬರುವುದಿಲ್ಲ ಎಂದು ಹೇಳಿ, ನಾವು ಅವರನ್ನು ಶಾಶ್ವತವಾಗಿ ಕಂಟ್ರಾಕ್ಟ್‌ನಲ್ಲಿ ಇಡುವುದಿಲ್ಲ, ಕನ್‌ಫರ್ಮ್ ಮಾಡಬೇಕೆಂದು ಹೇಳಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ 667 ಜನ 1997 ರಿಂದ ಇದ್ದಂತಹ ಕಂಟ್ರಾಕ್ಟ್ ಬೇಸಿಸ್‌ನವರನ್ನು ಕನ್‌ಫರ್ಮ್ ಮಾಡಿದ್ದೇವೆ. ಈಗ 396 ಜನರನ್ನು ಬಹುಶಃ ಆದಷ್ಟು ಬೇಗ ಎಂದರೆ ಅರ್ಲಿಯಾಗಿ ಆಗುತ್ತದೆ. ಆದಾದ ನಂತರ ನೆಕ್ಸ್ಟ ಸ್ಟೇಜ್, ಯಾರ್ಯಾರು ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಇದ್ದಾರೋ ಅವರನ್ನು ಹಂತಹಂತವಾಗಿ ಕನ್‌ಫರ್ಮ್ ಮಾಡಲಿಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಅದರಲ್ಲಿ ಯಾವುದೇ ಅನುಮಾನವೂ ಇಲ್ಲ, ಗೊಂದಲವೂ ಇಲ್ಲ ಎನ್ನುವುದನ್ನು ನಾನು ಸ್ಪಷ್ಟೀಕರಣ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ವರ್ಲ್ಡ್ ಬ್ಯಾಂಕ್‌ನಿಂದ 600–700 ಕೊಟಿ ರೂಪಾಯಿ ಖರ್ಚು ಮಾಡಿ ಅಪ್‌ಗ್ರೇಡ್ ಮಾಡಿದ್ದೇವೆ. ಆಸ್ಪತ್ರೆಗಳನ್ನು ಮಾಡಿದ್ದೇವೆ. ಒಂದೇ ಉದಾಹರಣೆ ಕೊಡುತ್ತೇನೆ, ನಿಮ್ಮನ್ನು ನಾನು ಪರ್ಸನಲ್ ಆಗಿ ಕಂಡಿದ್ದೇನೆ, ಶಿಕಾರಿಪುರದ ನಗರದಲ್ಲಿರುವಂತಹ 100 ಬೆಡ್ಡ್ ಆಸ್ಪತ್ರೆಗೆ ಒಬ್ಬ ಡಾಕ್ಟರ್ ಇದ್ದಾನೆ, ಅವನನ್ನು ಸಸ್ಪೆನೆಷ್‌ನಲ್ಲಿಟ್ಟಿದ್ದಾರೆ, ಎನ್‌ಕ್ವೈರಿ ಆಗುತ್ತಿದೆ, ಅವನನ್ನು ರಿಲೀವ್ ಮಾಡಬೇಕು, ಅವನನ್ನು ರಿಲೀವ್ ಮಾಡುತ್ತಿಲ್ಲ, ಏಕೆಂದರೆ ಇರುವವನು ಅವನೊಬ್ಬನೇ, ಅಂದರೆ 100 ಬೆಡ್ಡ್ ಹಾಸ್ಪಿಟಲ್‌ಗೆ ಕಳೆದ ಒಂದು ವರ್ಷದಿಂದ ಒಬ್ಬರೇ ಒಬ್ಬರು ಡಾಕ್ಟರ್ ಇದ್ದಾರೆ, ನಿಮ್ಮ ಇಲಾಖೆಯವರು ಕಣ್ಣುಮುಚ್ಚಿಕೊಂಡು ಕುಳಿತಿದ್ದಾರೆ, ನೀವು 3 ಜನರನ್ನು ಪೋಸ್ಟಿಂಗ್ಸ್ ಮಾಡಿದರೆ ಯಾರೂ ಬರಲಿಲ್ಲ. ಅದಕ್ಕೇ ನಾನು ನಿಮಗೆ ಹೇಳಿದೆ. ಬೀಗ ಹಾಕಿಸಿ ಬಿಡುತ್ತೇನೆಂದು ಹೇಳಿದೆ. ಏಕೆ ಹೇಳುತ್ತಿದ್ದೇನೆಂದರೆ ಡಾಕ್ಟರ್ಸ್ ಇದ್ದಾರೆ, ಅವರಿಗೆ ಏನು ಬೇಕೋ ಕೊಟ್ಟು ಎನ್‌ಕ್ವೈರಿ ಮಾಡಿ ಬೆನ್ನು ತಟ್ಟಿ ಗ್ರಾಮೀಣ ಪ್ರದೇಶಕ್ಕೆ ಕಳುಹಿಸಿಕೊಡುವುದನ್ನು ಬಿಟ್ಟು ಈ ಅಂಕಿ ಅಂಶಗಳನ್ನು ಕೇಳಿಕೊಂಡು ಕುಳಿತರೆ 9 ತಿಂಗಳು ಕಳೆದು ಹೋಯಿತಲ್ಲ ಸ್ವಾಮಿ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲದಲೇ, ಏನು ಗತಿ? ನೀವು ಒಂದು ಟೈಮ್ ಬೌಂಡ್ ಪ್ರೋಗ್ರಾಮ್ ಹಾಕಿಕೊಳ್ಳಿ, ಯಡಿಯೂರಪ್ಪನವರೇ, ಕಾರಜೋಳ್ ಅವರೇ ಇನ್ನೊಂದು ತಿಂಗಳಲ್ಲಿ ಈ ಸಮಸ್ಯೆ ಬಗೆಹರಿಸುತ್ತೇನೆ, ಅದೇ ಅಲ್ಲವೇನ್ರಿ ನಿಮ್ಮಂತಹ ಎಂಗ್ಸ್‌ರ್ಸ್ ಮಂತ್ರಿಯಾದರೆ ಸಾರ್ಥಕ ಆಗುವಂತಹದು.

ಶ್ರೀ ಎನ್.ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಪ್ರತಿಪಕ್ಷದ ನಾಯಕರು ಹೇಳತಕ್ಕದ್ದನ್ನು ಬಹಳ ಒತ್ತು ಕೊಟ್ಟು ಕಳೆದ ಬಾರಿ ಶಿಕಾರಿಪುರದಲ್ಲಿ ಡಾಕ್ಟರ್ ಇಲ್ಲ ಎಂದು ನನ್ನ ಗಮನಕ್ಕೆ ಬಂದ ತಕ್ಷಣ ಇಬ್ಬರನ್ನು ನೇಮಕ ಮಾಡಿದೆ, ಅವರಿಬ್ಬರೂ ರಜದ ಮೇಲೆ ಹೋದರೇ ವಿನಹ ವಾಪಸ್ ಅವರು ಡ್ಯೂಟಿನೇ ಬೇಡ ಎಂದರು. ಆದರೂ ಮೊನ್ನೆ ನಾನು ಶಿವಮೊಗ್ಗಕ್ಕೇ ಹೋದಾಗ ಖಾಸಗಿಯಾಗಿ ಮಾತನಾಡುತ್ತಾ ಹೇಳಿದೆ, ಅದು ಎಷ್ಟೇ ಕಷ್ಟ ಇರಲಿ, ಕನಿಷ್ಠ ಡಾಕ್ಟರನ್ನು ಕೊಡತಕ್ಕದ್ದನ್ನು ತಕ್ಷಣ ನಾವು ಏಪ್ರಿಲ್‌ನಲ್ಲಿ ಕೊಡುತ್ತೇವೆ. ಮೇ, ಜೂನ್, ಜುಲೈನಲ್ಲಿ ನೇಮಕಾತಿ ಮಾಡತಕ್ಕಂಥ ಸಂದರ್ಭದಲ್ಲಿ ಸಂಪೂರ್ಣವಾದಂತಹ 80–90 ಪರ್ಸೆಂಟ್ ನೇಮಕಾತಿ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಆ ಸಂದರ್ಭದಲ್ಲಿ ಇದೆಲ್ಲವನ್ನೂ ಬಗೆಹರಿಸುತ್ತೇವೆ. ಈಗ ಏಪ್ರಿಲ್ ಎಂಡ್, ಮೇ ಎಂಡ್ ಒಳಗೆ ಎಲ್ಲೆಲ್ಲಿ ಒಬ್ಬರು ಇಬ್ಬರು ಇದ್ದಾರೆ, 5–6 ಜನ ಇರತಕ್ಕ ಕಡೆ, ಕನಿಷ್ಠ 3–4 ಜನರನ್ನು ಕೊಡತಕ್ಕದ್ದಕ್ಕೆ ಅದು ಯಾವುದೇ ಸಮಸ್ಯೆ ಇರಲಿ ನಾವು ಅದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಮುಂದೆ ಹೋಗೋಣ

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಕಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರ್ಸ್‌ನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದಿರಲ್ಲ, ಅದರಲ್ಲಿ ಡೆಂಡಲ್ ಡಾಕ್ಟರ್ಸ್‌ನ್ನು ತೆಗೆದುಕೊಳ್ಳಬೇಡಿ ಎಂದು ನೀವು ಹೇಳಿದ್ದೀರಂತೆ, ಬರೇ ಜನರಲ್ ಸರ್ಜನ್ಸ್ ಮತ್ತು ಫಿಸಿಷಿಯನ್ಸ್ ಮಾತ್ರ ಎಂದು ಹೇಳಿದ್ದೀರಂತೆ, ಡೆಂಟಲ್ ಡಾಕ್ಟರ್ಸ್ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಬಹಳ ಅವಶ್ಯಕತೆ ಇದೆ, ಆ ಡೆಂಟಲ್ ಡಾಕ್ಟರ್ಸ್‌ನ್ನೂ ಕಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಳ್ಳಿ ಎಂದು ನೀವು ಇಮ್ಮೀಡಿಯೇಟ್ ಆಗಿ ಡಿ.ಸಿ. ಅವರಿಗೆ ಆದೇಶ ಕೊಡಬೇಕು, ಡೆಂಟಲ್ ಇಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ: ಈಗಾಗಲೇ ಆದೇಶವನ್ನು ಹೊರಡಿಸಿದ್ದೇನೆ. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಸ್ಪೆಷಲಿಸ್ಟ್‌ಗಳನ್ನು ತೆಗೆದುಕೊಳ್ಳಲು ಅವರಿಗೆ ಅಧಿಕಾರ ಇರಲಿಲ್ಲ. ಎಲ್ಲಿ ತುರ್ತು ಅವಶ್ಯಕತೆ ಇದೆ, ಅಲ್ಲೂ ನೇಮಕ ಮಾಡಿಕೊಳ್ಳಲಿಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಡೆಂಟಲ್ ಡಾಕ್ಟರ್ಸ್ ನೇಮಕ ಮಾಡಿಕೊಳ್ಳಬೇಕು.

ಶ್ರೀ ಎನ್.ಚೆಲುವರಾಯಸ್ವಾಮಿ: ಡೆಂಟಲ್ ಡಾಕ್ಟರ್ಸ್‌ಗಳನ್ನೂ ನೇಮಕ ಮಾಡಿಕೊಳ್ಳಲು ನಾವು ಡೈರೆಕ್ಷನ್ಸ್ ಕೊಟ್ಟಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇಲ್ಲಂತೆ, ನಾನು ಡಿ.ಸಿ. ಅವರ ಹತ್ತಿರ ಮಾತನಾಡಿದ್ದೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ: ನಾವು ಡೈರೆಕ್ಷನ್ಸ್ ಕೊಟ್ಟಿದ್ದೇವೆ, ಎಲ್ಲಾದರೂ ತಲುಪದೇ ಇದ್ದರೆ ನಮ್ಮ ಕಮೀಷನರ್ ಆಫೀಸ್‌ನಿಂದ ಮತ್ತೊಂದು ಡೈರೆಕ್ಷನ್ ಕೊಡಿಸುವುದಕ್ಕೆ ಹೇಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾನು ಮೊನ್ನೆ ಹೋದ ವಾರ ಕೇಳಿದೆ.

ಅಧ್ಯಕ್ಷರು : ಈಗ ಆಯಿತು ಸ್ವಾಮಿ. ಇದೇನು ಕೋರ್ಟ್ ಹಾಲ್ ತರಹ? ಒಂದೋ ಎರಡೋ ಉಪ ಪ್ರಶ್ನೆಗಳನ್ನು ಕೇಳಿ ಅಂದರೆ ಹೀಗಾದರೆ ಹೇಗೆ?

ಶ್ರೀ ಚೆಲುವರಾಯಸ್ವಾಮಿ : ಬಹುಶಃ ಒಂದು ವಾರ ಅಥವಾ 15 ದಿವಸದ ಹಿಂದೆ ಆದೇಶ ಮಾಡಿ ಎಲ್ಲ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಎಲ್ಲಾದರೂ ತಲುಪದೇ ಇರುವ ಕಡೆ ಇದ್ದರೆ ಇವತ್ತೇ ತಕ್ಷಣ ಕಳುಹಿಸಿಕೊಡುತ್ತೇನೆ.

157 (2538) **ಶ್ರೀ ಜಗದೀಶ್ (ವಿರೂಪಾಕ್ಷಿ) ಸಿ.ಮೇಟಗುಡ್** (ಬೈಲಹೊಂಗಲ) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಬೆಳಗಾಂ ಜಿಲ್ಲೆಯಲ್ಲಿ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿರುವ ಕಾಮಗಾರಿಗಳಾವುವು (ಯೋಜನೆವಾರು, ತಾಲ್ಲೂಕುವಾರು ವಿವರ ನೀಡುವುದು):

ಆ) ಈ ಯೋಜನೆಯಡಿ ಬೈಲಹೊಂಗಲ ತಾಲ್ಲೂಕಿನ ಅಮಟೂರ ಹಾಗೂ ಇತರ ಕಡೆಗಳಲ್ಲಿ ಸುಮಾರು 19 ಹಳ್ಳಿಗಳಲ್ಲಿ ಈ ಯೋಜನೆಯನ್ನು ರೂಪಿಸಲಾಗಿದೆಯೇ:

ಇ) ಈ ಯೋಜನೆ ವೆಚ್ಚ ಎಷ್ಟು? ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ; ಕಾಮಗಾರಿ ಮುಗಿಸಲು ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೆ?

ಈ) ಬೇಸಿಗೆಯ ಕಾಲದಲ್ಲಿ ಕುಡಿಯುವ ನೀರಿನ ಅಭಾವದ ದೃಷ್ಟಿಯಿಂದ ಸರ್ಕಾರವು ಕೈಗೊಳ್ಳಲಿರುವ ಕಾರ್ಯಕ್ರಮಗಳೇನು? ಪೂರ್ಣ ವಿವರ ನೀಡುವುದು?

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಆ) ಹೌದು

ಇ) ಈ ಯೋಜನೆಯ ಮೂಲ ಅಂದಾಜು ಮೊತ್ತ ರೂ.920.00 ಲಕ್ಷ. ಈ ಯೋಜನೆಯನ್ನು ಮೇ 2001 ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಪರಿಷ್ಕೃತ ಅಂದಾಜಿನನ್ವಯ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಏಪ್ರಿಲ್ 2005 ರ ವೇಳೆಗೆ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.